ಶ್ರೀ ಜೆ ಎಸ್. ದೇಶಮುಖ್ (ವಿದ್ಯುತ್, ಗಣಿ, ಹಾಗೂ ಭೂವಿಜ್ಞಾನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ ೧೯೮೩-೮೪ನೇ ಇಸವಿಯ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಹದಿನಾಲ್ಕನೆಯ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೫೬ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆಯ ಶಾಸನದ ೧೬(೨)ನೇ ಕಲಮಿನ ಮೇರೆಗೆ.

ಸೈನಿಕರು ಹಾಗೂ ಅವರ ಕುಟುಂಬದವರ ಕಲ್ಯಾಣದ ಉದ್ದೇಶಕ್ಕಾಗಿಯೇ ಉಪಯೋಗಿಸಿದ ವಾಹನ ಸಂಖ್ಯೆ ಸಿಎಬಿ ೯೨೯೫ಕ್ಕೆ ನೀಡಬೇಕಾದ ತೆರಿಗೆ ವಿನಾಯಿತಿಗೊಳಿಸುವುದಕ್ಕೆ ಸಂಬಂಧಪಟ್ಟಂತೆ ೬ನೇ ಆಗಸ್ಟ್ ೧೯೮೫ನೇ ದಿನಾಂಕದಂದು ಹೊರಡಿಸಲಾದ ಎಫ್‌ಟಿಡಿ ೨೨೦ ಟಿಎಟಿ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು

ವರದಿಗಳನ್ನು ಒಪ್ಪಿಸುವುದು

ಶ್ರೀ ಎಂ. ವೀರಪ್ಪ ಮೊಯಿಲಿ (ಅಧ್ಯಕ್ಷರು).—ಮಾನ್ಯ ಅಧ್ಯಕ್ಷರೆ,

ಅ) ಒಳಾಡಳಿತ ಇಲಾಖೆಗೆ ಸಂಬಂಧಿಸಿದಂತೆ ೫ನೇ ವರದಿಯಲ್ಲಿರುವ (೧೯೮೦-೮೨) (ಆರನೆಯ ವಿಧಾನ ಸಭೆ) ಶಿಫಾರಸ್ಸುಗಳ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮದ ಮೇಲಿನ ಮೂರನೆಯ ವರದಿ,

ಆ) ಶಿಕ್ಷಣ ಹಾಗೂ ಕಂದಾಯ ಇಲಾಖೆಗಳಿಗೆ ಸಂಬಂಧಿದಂತೆ ೨ ಹಾಗೂ ೧೪ನೇ ವರದಿಗಳಲ್ಲಿರುವ (೧೯೮೦-೮೨) (ಆರನೆಯ ವಿಧಾನ ಸಭೆ) ಶಿಫಾರಸ್ಸುಗಳ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮದ ಮೇಲಿನ ನಾಲ್ಕನೆಯ ವರದಿ,

ಇ) ೧೯೮೧-೮೨ ಹಾಗೂ ೧೯೮೨-೮೩ನೇ ಸಾಲುಗಳ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಅಧಿಕೃತವಾಗಿ ಪುರಸ್ಕೃತವಾದ ಅನುದಾನಗಳು ಹಾಗೂ ಪ್ರಭೃತ ವಿನಿಯೋಗಗಳಿಗೆ ಸಂಬಂಧಪಟ್ಟ ಐದನೆಯ ವರದಿ,

ಈ) ರೇಷ್ಮೆ ಇಲಾಖೆಯಲ್ಲಿ ಬಿ. ಒ. ಡಿ. ಕಾವು ಪೆಟ್ಟಿಗೆಗಳ ಖರೀದಿಗೆ ಸಂಬಂಧಿಸಿದಂತೆ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ಮೇಲಿನ ಆರನೆಯ ವರದಿಗಳನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆ

ಬೆಂಗಳೂರು ಜಿಲ್ಲೆಯ ಹುಲಿಮಂಗಲ ಆರೋಗ್ಯ ಉಪಕೇಂದ್ರದ ಎ.ಎನ್. ಎಂ. ರವರಿಗೆ ಸಂಬಳ ಹಾಗೂ ಇತರೆ ಭತ್ಯೆಗಳನ್ನು ನೀಡದಿರುವ ಬಗ್ಗೆ

ಶ್ರೀ ಕೆ ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಿಲ್ಲೆಯ ಹುಲಿಮಂಗಲ ಆರೋಗ್ಯ ಉಪಕೇಂದ್ರದ ಎ.ಎನ್ ಎಂ. ರವರಿಗೆ ಸಂಬಳ ಹಾಗೂ ಇತರೆ ಭತ್ಯೆಗಳನ್ನು ವಿತರಣೆ ಮಾಡದಿರುವ ವಿಚಾರದ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಆರೋಗ್ಯ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಆರೋಗ್ಯ ಮಂತ್ರಿಗಳಿಗೆ ಅನಾರೋಗ್ಯವಾಗಿದೆಯೇ ?

ಶ್ರೀ ಡಿ. ಮಂಜುನಾಥ್.—ಅವರು ಕೌನ್ಸಿಲ್‌ನಲ್ಲಿದ್ದಾರೆ.